ನೀಲಿ ಬಣ್ಣಕ್ಕೆ ಬದಲಿಸಿ ಜನರಿಗೆ ಬಟ್ಟೆ ಒದಗಿಸುತ್ತಿತ್ತು! ಒಳ್ಳೆಯ ಹೊಸ ಬಟ್ಟೆಗಳನ್ನು ಕೊಳ್ಳುವುದು ಯುದ್ಧದ ಸಮಯದಲ್ಲಿ ಕಷ್ಟವಾಗಿದ್ದರಿಂದ ಹೀಗೆ ಮಾಡಲಾಗುತ್ತಿತ್ತು. ಬಣ್ಣ ಅಳಿಸುವ, ಬದಲಿಸುವ ಈ ಮಾಂತ್ರಿಕ ಕಲೆ ನನ್ನನ್ನು ಸೆಳೆಯಿತು. ಇವುಗಳ ಬಗ್ಗೆ ಮತ್ತಷ್ಟು ತಿಳಿದುಕೊಳ್ಳಲು ನನ್ನ ಬಾಸ್‌ಗೆ ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಲಾರಂಭಿಸಿದೆ. ಆತ ಕಿರಿಕಿರಿಗೊಂಡರೂ ತನಗೆ ತಿಳಿದಿದ್ದೆಲ್ಲವನ್ನೂ ನನಗೆ ಹೇಳಿಕೊಟ್ಟ. ಇದು ಕೆಮಿಸ್ಟ್ರಿಯ ಕಡೆ ನನ್ನೊಲವು ಬೆಳೆಯಲು ಕಾರಣವಾಯಿತು. ಕೆಮಿಸ್ಟ್ರಿಯ ಪುಸ್ತಕಗಳನ್ನು ಓದಲು ಶುರುಮಾಡಿದೆ. ಹೊಸದೊಂದು ಜ್ಞಾನಲೋಕದ ಅನಾವರಣವಾಯಿತು. ಕೈಗೆ ಸಿಗುವಂತಿದ್ದ ವಸ್ತುಗಳನ್ನೇ ಬಳಸಿ ಸಂಶೋಧನೆಗಳನ್ನು ಮಾಡಲು ಶುರುಮಾಡಿದೆ. ನನ್ನದೇ ಒಂದು ಪ್ರಯೋಗಶಾಲೆ ಸಿದ್ಧಪಡಿಸಿಕೊಳ್ಳುವ ಕನಸು ಕಾಣಲಾರಂಭಿಸಿದೆ. ಆಗ ಎಂ. ಬ್ರಾನ್ಕೋರ್ಟ್ ಎನ್ನುವ ವ್ಯಕ್ತಿ ತನ್ನ ಔಷಧಗಳ ಪ್ರಯೋಗಶಾಲೆಯ ವಸ್ತುಗಳು ಮಾರಾಟಕ್ಕಿವೆ ಎಂದು ತೂಗುಹಾಕಿದ್ದ ಬೋರ್ಡ್ ಕಣ್ಣಿಗೆ ಬಿತ್ತು. ಫ್ಯಾಕ್ಟರಿಗೆ ಹೋಗುತ್ತಾ ಬರುತ್ತಾ ಅದನ್ನು ನೋಡುತ್ತಿದ್ದವ ಒಂದು ದಿನ ಆತನ ಬಳಿ ಮಾತಾಡುವ ಧೈರ್ಯ ಮಾಡಿದೆ. ನನ್ನ ಆಸಕ್ತಿಯನ್ನು ಕಂಡು ಆತ ಅತಿ ಕಡಿಮೆ ಬೆಲೆಗೆ ತನ್ನ ವಸ್ತುಗಳನ್ನು ನೀಡಲು ಒಪ್ಪಿಕೊಂಡ. ಅಲ್ಲಿಂದ ನಮ್ಮ ಸ್ನೇಹ ಬೆಳೆಯಿತು. ರಸಾಯನಶಾಸ್ತ್ರದ ಬಗ್ಗೆ ತನಗಿದ್ದ ತಿಳಿವಳಿಕೆಯನ್ನು ನನ್ನೊಂದಿಗೆ ಹಂಚಿಕೊಂಡ. ನನ್ನ ಸಂದೇಹಗಳನ್ನು ಪರಿಹರಿಸಿಕೊಳ್ಳಲು ನೆರವಾದ. ಓದಿದ್ದರ ಪ್ರಯೋಗ ಮಾಡಬೇಕಲ್ಲ? ಎಲ್ಲವೂ ನನ್ನ ಪ್ರಯೋಗಶಾಲೆಯಲ್ಲೇ ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಒಂದು ಬೆಣ್ಣೆಯ ಡೈರಿಯಲ್ಲಿ ಸಂಬಳವಿಲ್ಲದೆ ಸಹಾಯಕ ಕೆಲಸ ಮಾಡಲು ಹೋಗುತ್ತಿದ್ದೆ. ಅಲ್ಲೇ ಲ್ಯಾಕ್ಟಿಕ್ ಆಸಿಡ್‌ನ ಮಹಿಮೆ ನನಗರ್ಥವಾಗಿದ್ದು. ರೈತರು ತರುತ್ತಿದ್ದ ಬೆಣ್ಣೆಯಲ್ಲಿನ ಕೊಬ್ಬಿನ ಅಂಶ ಎಷ್ಟಿದೆ ಎನ್ನುವುದನ್ನು ಪರೀಕ್ಷಿಸಲು ಇದನ್ನು ಬಳಸುತ್ತಿದ್ದರು. ಈ ಅರಿವೇ ಮುಂದೆ ನನ್ನ ನಕಲಿ ದಾಖಲೆ ಸೃಷ್ಟಿಸುವ ಬದುಕಿಗೆ ಮುಖ್ಯ ಅರ್ಹತೆಯಾಯಿತು. ನನ್ನ ಪರಿಮಿತಿಯಲ್ಲೇ ಪ್ರಯೋಗಗಳನ್ನು ಮಾಡುತ್ತ ಅಳಿಸಲಾಗದ ಕಲೆಗಳನ್ನು, ಬಣ್ಣಗಳನ್ನು ಅಳಿಸುವ ವಿಧಾನವನ್ನು ಕಂಡುಕೊಂಡಿದ್ದೆ. ಸುತ್ತಮುತ್ತಲಿನ ಜನ ತಮ್ಮ ಬಟ್ಟೆಗಳಿಗೆ ಅಂಟಿಕೊಂಡ ಕಲೆಗಳನ್ನು ಹೋಗಲಾಡಿಸಿಕೊಳ್ಳಲು ನನಗೆ ನೀಡಲಾರಂಭಿಸಿದರು.

ನಿಧಾನವಾಗಿ ಯುದ್ಧದ ನೆರಳು ನಾವಿದ್ದ ಊರಿನ ಮೇಲೆ ಕವಿಯಲಾರಂಭಿಸಿತು. ಯಹೂದಿಗಳು ಪೊಲೀಸ್ ಸ್ಟೇಷನ್ನಿಗೆ ಹೋಗಿ ತಮ್ಮ ವಿವರಗಳನ್ನು ದಾಖಲಿಸಬೇಕು ಅನ್ನುವ ನಿಯಮ ಜಾರಿಗೆ ಬಂದಿತು. ನನ್ನ ಸೋದರಮಾವ ಲಿಯಾನ್ ತನ್ನ ಮನೆಯನ್ನು ಜರ್ಮನ್ ಸೇನೆಯ ಉಪಯೋಗಕ್ಕೆ ನೀಡಲು ನಿರಾಕರಿಸಿದ್ದರಿಂದ ತೊಂದರೆಗೆ ಸಿಕ್ಕಿಹಾಕಿಕೊಂಡ. ಪ್ರಾಣ ಉಳಿಸಿಕೊಳ್ಳಲು ಊರು ಬಿಟ್ಟುಹೋದ. ನನ್ನಮ್ಮ ಹಾಗೂ ಸೋದರಮಾವನ ನಡುವೆ ಪತ್ರ ವ್ಯವಹಾರ ಅದುಹೇಗೋ ಗುಟ್ಟಾಗಿ ನಡೆಯುತ್ತಿತ್ತು. ಇದರ ಸುಳಿವು ಗುಪ್ತಚರರಿಗೆ ಸಿಕ್ಕಿತು. ಇದನ್ನು ತಿಳಿದು ನನ್ನಮ್ಮ ತಮ್ಮನನ್ನು ಎಚ್ಚರಿಸಲು ಪ್ಯಾರಿಸ್‌ಗೆ ಹೋದವಳು ವಾಪಸ್ಸು ಬರಲೇ ಇಲ್ಲ. ರೈಲಿನಲ್ಲೇ ಆಕೆಯನ್ನು ಗುಪ್ತಚರರು ಕೊಂದು ಅದನ್ನು ಅಪಘಾತವೆಂದು ನಮೂದಿಸಿಬಿಟ್ಟರು.

ಯುದ್ಧದ ಸಮಯವಾದ್ದರಿಂದ ಮೂಲಭೂತ ವಸ್ತುಗಳು ಕೂಡ ಸಿಗುವುದು ಕಷ್ಟವಾಗುತ್ತಿತ್ತು. ನನ್ನ ಪ್ರಯೋಗಗಳಿಂದ ಸೋಪು ಹಾಗೂ ಕ್ಯಾಂಡಲ್ ಮಾಡುವುದನ್ನು ಕಂಡುಕೊಂಡಿದ್ದೆ. ಸಾಂಕ್ರಾಮಿಕ ರೋಗಗಳ ಭೀತಿಯಿದ್ದ ಪ್ರದೇಶಗಳಿಗೆ ಸೋಪನ್ನು ಒದಗಿಸಲು ಬ್ರಾನ್ಕೋರ್ಟ್ ನಿರಂತರವಾಗಿ ಸೋಪಿಗಾಗಿ ಬೇಡಿಕೆ ಮುಂದಿಡುತ್ತಿದ್ದ. ಸೋಪಿನ ತಯಾರಿಕೆಗೆ ಅಗತ್ಯವಿದ್ದ ಕಚ್ಚಾವಸ್ತುವನ್ನು ಉಚಿತವಾಗಿ ನೀಡುವವನೊಬ್ಬ ಸಿಕ್ಕಿದ್ದರಿಂದ ಬ್ರಾನ್ಕೋರ್ಟ್‌ಗೆ ಮಾತ್ರವಲ್ಲದೆ